





ಚಾಂದನಿ ಚೌಕ್‌ನಿಂದ ಹಿಂಜವಾಡ ಮಾರ್ಗವಾಗಿ, ಮುಂದೆ ಸಹ್ಯಾದ್ರಿ ಬೆಟ್ಟವನ್ನು ಸೀಳಿಕೊಂಡು ಸಾಗುವ ದಾರಿಯಲ್ಲಿ ಪಯಣಿಸುವುದೇ ಅತ್ಯಂತ ಚೇತೋಹಾರಿ ಅನುಭವ. ಮಾರ್ಗದುದ್ದಕ್ಕೂ ಅಲ್ಲಲ್ಲಿ ಕಾಣಸಿಗುವ ನೀರಿನ ತೊರೆಗಳು, ಬೆಟ್ಟದಂಚಿನಿಂದ ವಯ್ಯಾರ ಸೂಸುತ್ತ ಧರೆಗೆ ಮುತ್ತಿಕ್ಕುವ ಸಣ್ಣ ಪುಟ್ಟ ಜಲಪಾತಗಳು ತಮ್ಮ ಚಿತ್ತಾಪಹಾರಿ ಚೆಲುವಿನಿಂದ ಓಡುತ್ತಿರುವ ವಾಹನಗಳನ್ನು ತಡೆದು ನಿಲ್ಲಿಸಿ ನೋಡುಗರ ಕಣ್ಮನಗಳನ್ನು ತಂಪಾಗಿಸುತ್ತವೆ. ದಟ್ಟ ಹಸಿರಿನಿಂದ ಆವೃತವಾದ ಕಣಿವೆಗಳ ಮಧ್ಯದ ಶಾಂತ ಸರೋವರಗಳ ಸ್ನಿಗ್ಧ ಸೌಂದರ್ಯ ಹೆಜ್ಜೆಯನ್ನು ಮುಂದಿಡದಂತೆ ತಡೆದು ನಿಲ್ಲಿಸುತ್ತದೆ. ಹೀಗಾಗಿ 20 ಕಿ.ಮೀ. ಮಾರ್ಗವನ್ನು ಕಾರಿನಲ್ಲಿ ಕ್ರಮಿಸಲು ನಾವು ತೆಗೆದುಕೊಂಡ ಸಮಯ ಎರಡು ತಾಸಿಗಿಂತಲೂ ಹೆಚ್ಚು. ಹಾಗೆ ನೋಡಿದರೆ ಲವಾಸಾಗಿಂತ ಲವಾಸಾ ಮಾರ್ಗವೇ ಹೆಚ್ಚು ಸುಂದರ.

ಪಕ್ಷಿ ವೀಕ್ಷಣೆಯ ಹವ್ಯಾಸಿಗರಿಗೆ, ಭಾರತದ ಅಪರೂಪದ ಸಣ್ಣ ಪಕ್ಷಿಪ್ರಭೇದಗಳಲ್ಲಿ ಒಂದಾದ 'ಟಿಕ್ಲೆಸ್ ಫ್ಲವರ್ ಪೀಕರ್'ನ ದರ್ಶನ ಭಾಗ್ಯ ಇಲ್ಲಿ ಲಭ್ಯವಾಗಬಹುದು. ಜೂನ್‌ನಿಂದ ಸೆಪ್ಟೆಂಬರ್ ತಿಂಗಳುಗಳ ಮಧ್ಯದ ಮಾನ್ಸೂನ್ ಅವಧಿ ವೀಕ್ಷಣೆಗೆ, ವಿಹಾರಕ್ಕೆ ಹೆಚ್ಚು ಪ್ರಶಸ್ತ. ಮಳೆಗಾಲದ ಅವಧಿಯಲ್ಲಿ ಇಲ್ಲಿನ ದೈನಂದಿನ ತಾಪಮಾನ ಕನಿಷ್ಟ 5 ಡಿಗ್ರಿ ಸೆಲ್ಸಿಯಸ್‌ನಿಂದ ಗರಿಷ್ಠ 32 ಡಿಗ್ರಿ ಸೆಲ್ಸಿಯಸ್‌ನಷ್ಟಿರುತ್ತದೆ.

ಲವಾಸಾ ದ ಮತ್ತೊಂದು ಆಕರ್ಷಣೆ ಬೋಟಿಂಗ್. ಪ್ರೇಮಿಗಳು ರಕ್ಷಾ ಕವಚಗಳನ್ನು ತೊಟ್ಟು, ಇಬ್ಬಿಬ್ಬರೇ ಹುಟ್ಟು ಹಾಕುವ ದೃಶ್ಯ ಮನಸ್ಸನ್ನು ಪುಲಕಗೊಳಿಸುತ್ತದೆ. ಮೋಟಾರ್ ಬೋಟಿಂಗ್‌ನ ವ್ಯವಸ್ಥೆಯೂ ಲಭ್ಯ. ಇಲ್ಲಿನ ಊಟ, ವಸತಿಯ ವ್ಯವಸ್ಥೆ ಮಧ್ಯಮ ವರ್ಗಕ್ಕೆ ಸ್ವಲ್ಪ ದುಬಾರಿಯೇ ಎನ್ನಬಹುದು. ಇಲ್ಲಿ ಸಾರ್ವಜನಿಕ ಸಾರಿಗೆಯನ್ನು ನೆಚ್ಚಿಕೊಳ್ಳುವಂತಿಲ್ಲ. ಸ್ವಂತ ವಾಹನ ವ್ಯವಸ್ಥೆ ಇದ್ದರೆ ಮಾತ್ರ ಸಂತೋಷ ಅನುಭವಿಸಬಹುದು.

ಇತ್ತೀಚೆಗೆ ಬಾಲಿವುಡ್ ಸಹ ಇದರ ಮೋಹಕ್ಕೊಳಗಾದ ಪರಿಣಾಮವಾಗಿ ಮುಂಬೈ ನಾಗರಿಕತೆ ಇಲ್ಲಿ ಕಣ್ಣಿಗೆ ರಾಚುತ್ತದೆ. ಸುಂದರ ತಾಣಗಳೇನೋ ಇವೆ; ಆದರೆ ಅಲ್ಲಿಗೆ ಓಡಾಡುವ ಪ್ರವಾಸಿಗರಿಗೆ ಪರಿಸರ ಪ್ರಜ್ಞೆಯನ್ನು ಯಾರು ಹೇಳಿಕೊಡುವುದು? ಪರಿಸರದ ಕುರಿತು ಪ್ರವಾಸಿಗರ ನಿರ್ಲಕ್ಷ್ಯ, ಅತಿಯಾದ ಪ್ಲಾಸ್ಟಿಕ್ ಬಳಕೆ, ಆಡಳಿತ ವರ್ಗದ ತಾತ್ಸಾರ ಧೋರಣೆ– ಈ 'ಸ್ವರ್ಗದ ತುಂಡ'ನ್ನು ನರಕ ಸದೃಶವಾಗಿಸಬಹುದಾದ ಆತಂಕವನ್ನು ಕಡೆಗಣಿಸುವಂತಿಲ್ಲ.